

# ವಿದೇಶಿ ಟೀವಿಗಳಲ್ಲೂ ನಟಿಸಿದ್ದೇನೆ

**ನೇತ್ರಾ ಜಾದವ್**
ಉದಯದ ‘ಸುಂದರಿ’ಯ ಊರ್ಮಿಳಾ

◆ **ನಿಮ್ಮ ಕಲಾಜೀವನ ಆರಂಭ ಹೇಗಾಯಿತು?**

ಚಿಕ್ಕವಯಸ್ಸಿನಲ್ಲೇ ಸ್ವಯಂ ಆಸಕ್ತಿಯಿಂದ ಡಾನ್ಸ್, ನಾಟಕ ಅಭ್ಯಾಸ ಆರಂಭಿಸಿದೆ. ಕಾರವಾರ ಜಿಲ್ಲೆಯ ದಾಂಡೇಲಿ ಸಮೀಪದ ಗಣೇಶಗುಡಿ ಎಂಬ ಅರಣ್ಯ ಪ್ರದೇಶದೊಳಗಣ ಚಿಕ್ಕಹಳ್ಳಿಯಲ್ಲಿ ಬೆಳೆದೆ. ತಂದೆ– ತಾಯಿ ಕೆ.ಪಿ.ಸಿ.ಯಲ್ಲಿ (ವಿದ್ಯುತ್ ಕಂಪನಿ) ನೌಕರರಾಗಿದ್ದರು. ಎಸ್.ಎಸ್.ಎಲ್.ಸಿ. ತನಕ ನಗರದ ಸಂಪರ್ಕವೇ ಇರಲಿಲ್ಲ. ಆನಂತರ ಕಾಲೇಜು ಶಿಕ್ಷಣಕ್ಕೆ ನಗರಕ್ಕೆ ಬಂದೆ. ಡಿಪ್ಲೊಮಾ ಇನ್ ಮೆಡಿಕಲ್ ಲ್ಯಾಬ್ ಟೆಕ್ನಿಷಿಯನ್ ನಂತರ ಬಿ.ಎಸ್.ಸಿ. ಮಾಡಿ, ಎಂ.ಬಿ.ಎ.ಯಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದೇನೆ. ನಾನು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾಗ ಝೀ ಕನ್ನಡದಲ್ಲಿ ಅಡುಗೆ ಕಾರ್ಯಕ್ರಮದಲ್ಲಿ ಮೊದಲು ಕಾಣಿಸಿಕೊಂಡೆ. ಆನಂತರ ಮಹಾಶಿವರಾತ್ರಿ ದಿನ ಶಿವನ ಅವತಾರಗಳನ್ನು ಪರಿಯಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೆ. ನಟಿಯಾಗಿ ಮೊದಲ ಬಾರಿಗೆ ‘ಸುವರ್ಣ’, ‘ಉದಯ’ ಟೀವಿ ಸೇರಿ ತೆಲುಗಿನ ಎರಡು ಧಾರಾವಾಹಿಗಳಲ್ಲಿ ಪ್ರಧಾನ ಪಾತ್ರಗಳನ್ನೇ ನಿರ್ವಹಿಸಿದೆ. ಮದುವೆಯಾದ ಬಳಿಕ ಹತ್ತು ವರ್ಷ ಹೊರದೇಶದಲ್ಲಿ ನೆಲೆಸಿದೆ. ಇದರಿಂದ ಕನ್ನಡ ತೆರೆಯಿಂದ ಮರೆಯಾಗುವಂತೆ ಆಯಿತು.

◆ **ವಿದೇಶ ಪ್ರಯಾಣ ಕಲಾ ಜೀವನಕ್ಕೆ ಕುಂದು ತರುತ್ತದೆ ಎಂದು ಆಗ ಅನ್ನಿಸಲಿಲ್ಲವೇ?**

ವಿದೇಶಕ್ಕೆ ಹೋಗುತ್ತಿದ್ದೇನೆ ಎನ್ನುವುದು ನನಗೆ ಗೊತ್ತಿದ್ದೇ ನಾನು ಮದುವೆ ಆದೆ. ನಟನೆಯನ್ನು ಬಿಟ್ಟು ಹೋಗುತ್ತಿದ್ದೇನೆ ಎನ್ನುವ ವಿಷಾದ ನನಗಂತೂ ಇರಲಿಲ್ಲ. ಒಮ್ಮೆ ಬಣ್ಣ ಹಚ್ಚಿದರೆ ಅದನ್ನು ಅಳಿಸಲು ಸಾಧ್ಯ ಇಲ್ಲ ಎನ್ನುವ ಮಾತಿದೆ. ಅದೇ ರೀತಿ ನನ್ನ ಜೀವನದಲ್ಲೂ ಆಯಿತು. ಆ ವಿಷಯದಲ್ಲಿ ನಾನು ಅದೃಷ್ಟವಂತೆ. ಇಂಗ್ಲಿಷ್ ವಾಹಿನಿಯೊಂದರಲ್ಲಿ ನಟನೆ ಮಾಡಿದೆ. ಅದು ಅಪರಾಧ ಜಗತ್ತಿನ ಸರಣಿಯ ಕಥೆ ಆಗಿತ್ತು. ಅದಕ್ಕೆ ಅವರು ಪೌರಾತ್ಯ ದೇಶದ ನಟಿಯರ ಹುಡುಕಾಟ ನಡೆಸಿದ್ದರು. ನಾನು ಆಯ್ಕೆಯಾದೆ. ಅಂತಹ ಮೂರು ಪಾತ್ರಗಳನ್ನು ಮಾಡಿದೆ. ಅದರ ಜೊತೆ ಕೆಲವೊಂದು ಜಾಹೀರಾತುಗಳನ್ನು ನಟಿಸಿದ್ದೂ ಇದೆ.

◆ **ಜಗತ್ತು ಸುತ್ತಿದ ಅನುಭವವನ್ನು ಸೃಜನಶೀಲವಾಗಿ ಕನ್ನಡಕ್ಕೆ ಒಗ್ಗಿಸುವ ಕನಸು ಏನಾದರೂ ಇದೆಯಾ?**

ನಮ್ಮ ತಂದೆ–ತಾಯಿ ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು ಎನ್ನುವ ಮಾತನ್ನೇ ಹೇಳುತ್ತಿದ್ದರು. ಎಲ್ಲ ಪೋಷಕರು ಹಾಗೆಯೇ ಹೇಳುವುದು. ನಾವು ನಮ್ಮ ಇತಿ ಮಿತಿಯಲ್ಲೇ ಯೋಚಿಸಬೇಕು ನಿಜ. ಆದರೆ ದೊಡ್ಡದಾಗಿ ಕನಸು ಕಾಣಬೇಕು ಎನ್ನುವ ಆಸೆ ನನ್ನದು. ಅದೇ ರೀತಿ ಕನಸು ಕಾಣುತ್ತಿದ್ದೆ. ನಾನು ಅಂದುಕೊಂಡಿದ್ದಕ್ಕಿಂತ ಹೆಚ್ಚಿನ ಅವಕಾಶ ನನಗೆ ಸಿಕ್ಕಿವೆ. ದಶಕದ ನಂತರ ಮತ್ತೆ ಕರ್ನಾಟಕಕ್ಕೆ ಬರುತ್ತೇನೆ. ಬಂದ ನಂತರ ನಟಿಸುತ್ತೇನೆ ಎಂದುಕೊಂಡಿರಲಿಲ್ಲ. ಯೂರೋಪ್, ಜರ್ಮನಿ, ಅಮೆರಿಕ, ದಕ್ಷಿಣ ಕೋರಿಯಾದಲ್ಲಿ ನೆಲೆಸಿ ಬಂದಿದ್ದೇನೆ. ಉದಯದ ‘ಆಕೃತಿ’ ಅರ್ಧಕ್ಕೆ ನಿಂತಿತು. ಅದೇ ವಾಹಿನಿಯಿಂದ ‘ಸುಂದರಿ’ಯಲ್ಲಿ ಮತ್ತೊಂದು ಅವಕಾಶ ಸಿಕ್ಕಿದೆ.

ಪ್ರತಿಕ್ಷಣ ನನಗೆ ಅನ್ನಿಸುವ ಸಂಗತಿ ಏನೆಂದರೆ, ತಾಂತ್ರಿಕವಾಗಿ ನಾವು ಹೆಚ್ಚು ಪ್ರಬಲರಾಗಬೇಕು. ಬೇರೆ ಯಾರನ್ನೂ ಅನುಕರಣೆ ಮಾಡುವ ಅಗತ್ಯ ಇಲ್ಲ. ಯಾವುದೇ ಕಥೆಯ ನಿರ್ಮಾಣದ ಹಿಂದೆ ಅಧ್ಯಯನ ಇರಬೇಕು. ತಾಂತ್ರಿಕವಾಗಿ ಕಲಿತು ನಡೆಸುವ ಹೊಸ ಪ್ರಯೋಗ ಪರಿಣಾಮಕಾರಿಯಾಗಿರುತ್ತದೆ. ತಾಂತ್ರಿಕ ತಿಳಿವಳಿಕೆ ಗಳಿಸಬೇಕು. ಚಿಕ್ಕ ಚಿಕ್ಕ ಕಥೆ ಬರೆದಿದ್ದೇನೆ. ಈವರೆಗೆ ಯಾರಿಗೂ ತೋರಿಸಿಲ್ಲ. ಮುಂದೆ ಏನುಮಾಡುತ್ತೇನೋ ನೋಡಬೇಕು.

◆ **ಸುಂದರಿಯಲ್ಲಿ ನಿಮಗೆ ಮತ್ತೆ ಚೈತನ್ಯ ಬರಬಹುದಾ?**

‘ಸುಂದರಿ’ ಐ.ಎ.ಎಸ್. ಅಧಿಕಾರಿಯ ಕಥೆ. ಇದರಲ್ಲಿ ಇರುವ ಕುತೂಹಲದ ಅಂಶಗಳಲ್ಲಿ ಒಂದು ಏನೆಂದರೆ ನಾನು ಎಂದು ಏಳುತ್ತೇನೆ ಎನ್ನುವುದು. ಖಾಸಗಿಯಾಗಿ ಎಷ್ಟು ದಿನ ಹೀಗೆ ಕೂರುತ್ತೀರಿ ಎಂದು ಜನ ಕೇಳುತ್ತಿದ್ದಾರೆ. ನಟಿಯಾಗಿ ಎಂತಹ ಪಾತ್ರವಾದರೂ ಮಾಡಬೇಕು. ಸಿನಿಮಾದಲ್ಲಾದರೆ ಪಾತ್ರಕ್ಕೆ ಚಲನಶೀಲತೆಯ ತೀವ್ರತೆ ಹೆಚ್ಚಿಸುತ್ತದೆ. ಮೆಗಾ ಧಾರಾವಾಹಿಯಲ್ಲಿ ಪ್ರತಿ ಸನ್ನಿವೇಶವೂ ಮಂದವಾಗಿ ಸಾಗುತ್ತದೆ. ನನಗೆ ಪಾರ್ಶ್ವವಾಯು ಆಗಿದೆ. ಮಾತನಾಡಲೂ ಆಗುತ್ತಿರಲಿಲ್ಲ. ಈಗ ಮಾತು ಬಂದಿದೆ. ಮುಂದೆ ನಡೆದಾಡುತ್ತೇನೆ. ಕಥಾ ನಾಯಕ ಕರಣ್ ಇಬ್ಬರಿಗೆ ಮೋಸ ಮಾಡಿದ್ದಾನೆ. ಒಬ್ಬಳು ನನ್ನ ದತ್ತು ಪುತ್ರಿ, ಮತ್ತೊಬ್ಬಳು ನನ್ನ ಕಂಪನಿಯ ಸಿಬ್ಬಂದಿ. ಆಕೆ ನನ್ನನ್ನು ತುಂಬ ಪ್ರೀತಿ ಮಾಡುತ್ತಾಳೆ. ಅವಳು ತುಂಬ ಬುದ್ಧಿವಂತೆ. ಆಕೆಗೆ ಐಎಎಸ್ ಮಾಡುವ ಕನಸಿದೆ. ನನ್ನ ಕಂಪನಿಯ ಜವಾಬ್ದಾರಿಯನ್ನು ನನ್ನ ಅಳಿಯನಿಗೆ ಕೊಟ್ಟಿದ್ದೇನೆ. ಅವನು ನನ್ನ ಮಗಳನ್ನೂ ಮತ್ತು ಸುಂದರಿಯನ್ನು ವಂಚಿಸಿ ಮದುವೆ ಆಗಿದ್ದಾನೆ. ಅದೆಲ್ಲ ನನಗೆ ಗೊತ್ತು ಆದರೆ ಹೇಳಲು ಆಗುತ್ತಿಲ್ಲ. ಸಾಮಾಜಿಕ ಮಾಧ್ಯಮಗಳಲ್ಲಿ ತುಂಬ ಜನ ನನ್ನ ಈ ಪಾತ್ರವನ್ನು ಇಷ್ಟಪಡುತ್ತಾರೆ.

■ **ರಾಘವೇಂದ್ರ ಕೆ.**